# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

**ಉಪಸ್ಥಿತರು**

**ಶ್ರೀಮತಿ ಲಕ್ಷ್ಮಿ.ಎಂ.ವಿ**

ಬಿ.ಎ,, ಎಲ್.ಎಲ್.ಬಿ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಚನ್ನರಾಯಪಟ್ಟಣ

**ತೀರ್ಪಿನ ದಿನಾಂಕಃ 13 ನೇ** ಮಾರ್ಚ್ **2020**

## ಅಸಲು ದಾವಾ ನಂ. 376/2009

**ವಾದಿ:**

ರಂಗಮ್ಮ ಕೋಂ ಚಂದ್ರಶೇಖರ್,
ಸುಮಾರು 52 ವರ್ಷ ವಯಸ್ಸು,
ಅಮ್ಮ ನಿಲಯ, ವಿವೇಕಾನಂದ ನಗರ,
ಚನ್ನರಾಯಪಟ್ಟಣ.

( ವಾದಿಯ ಪರ ಶ್ರೀ ಎನ್.ಜಿ ., ವಕೀಲರು)

**-ವಿರುದ್ಧ-**

**ಪ್ರತಿವಾದಿಯರುಃ**

1. ಕೃಷ್ಣೇಗೌಡ ಬಿನ್ ರಂಗಪ್ಪ,
ಸುಮಾರು 55 ವರ್ಷ ವಯಸ್ಸು,
ಬೆಲಸಿಂದ ಫಾರೆಸ್ಟ್ ಹತ್ತಿರ ಗುಲಸಿಂದ ರಸ್ತೆ,
ಚನ್ನರಾಯಪಟ್ಟಣ

2. ರವೀಶ್ ಬಿನ್ ರಂಗಪ್ಪ,
ಸುಮಾರು 43 ವರ್ಷ ವಯಸ್ಸು,
ರಾಮಮಂದಿರ ಹಿಂಭಾಗ,
ಮೇಗಲಕೇರಿ,
ಚನ್ನರಾಯಪಟ್ಟಣ.

3. ಕಮಲಮ್ಮ ಕೋಂ ಬೋಜೇಗೌಡ,
ಸುಮಾರು 50 ವರ್ಷ ವಯಸ್ಸು,
ಬೆಲಸಿಂದ ಫಾರೆಸ್ಟ್ ಹತ್ತಿರ, ಗುಲಸಿಂದ ರಸ್ತೆ,
ಚನ್ನರಾಯಪಟ್ಟಣ.

4. ಎಣ್ಣಮ್ಮ ಕೋಂ ಮಂಜೇಗೌಡ,
ಸುಮಾರು 48 ವರ್ಷ ವಯಸ್ಸು,
ಹೇಮಾವತಿ ಕ್ವಾಟ್ರಸ್,
ಕಲ್ಲೇಶಾಚಾರ್ ಬಿಲ್ಡಿಂಗ್,
ಚನ್ನರಾಯಪಟ್ಟಣ.

5.ಮಂಜುಳ(ಬೇಬಿ) ಕೋಂ ಹನುಮೇಗೌಡ
ಸುಮಾರು 39 ವರ್ಷ ವಯಸ್ಸು,
ಕುವೆಂಪುನಗರ
ಚನ್ನರಾಯಪಟ್ಟಣ.

6. ಡಿ.ಎನ್. ಮಂಜೇಗೌಡ ಬಿನ್ ನಿಂಗೇಗೌಡ,
ಧನಲಕ್ಷ್ಮಿ ನಿಲಯ
4 ನೇ ಮುಖ್ಯ ರಸ್ತೆ,
ವಿವೇಕಾನಂದ ನಗರ,
ಚನ್ನರಾಯಪಟ್ಟಣ.

( 1 ನೇ ಪ್ರತಿವಾದಿ ಏಕಪಕ್ಷೀಯ, 2 ನೇ ಪ್ರತಿವಾದಿ ಪರ ಶ್ರೀಮತಿ ಚಂದನ ವಕೀಲರು, 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಎಸ್.ಜಿ ವಕೀಲರು, 5 ಮತ್ತು 6 ನೇ ಪ್ರತಿವಾದಿ ಪರ ಶ್ರೀ ಎಸ್.ಆರ್.ಎಸ್. ವಕೀಲರು )

| | | |
|---|---|---|
| 1.ದಾವಾ ದಾಖಲು ಮಾಡಿದ ದಿನಾಂಕ | : | 26-08-2009 |
| 2. ದಾವೆಯ ಸ್ವರೂಪ | : | ವಿಭಾಗ ಕೋರಿ |
| 3. ಸಾಕ್ಷ್ಯ ಪ್ರಾರಂಭವಾದ ದಿನಾಂಕ | : | 28-08-2017 |
| 4. ತೀರ್ಪು ನೀಡಿದ ದಿನಾಂಕ | : | 13-03-2020 |

| | | | | |
|---|---|---|---|---|
| 5. ಒಟ್ಟು ತೆಗೆದುಕೊಂಡ ಸಮಯ | : | <u>ವರ್ಷ</u> | <u>ತಿಂಗಳು</u> | <u>ದಿನ</u> |
| | | 10 | 06 | 17 |

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

## <u>ತೀರ್ಪು</u>

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ ದಾವಾ ಸ್ವತ್ತುಗಳಲ್ಲಿ 1/6 ನೇ ಭಾಗದ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನ ಕೊಡಿಸಬೇಕೆಂದು ಕೋರಿ ಈ ದಾವೆ ಸಲ್ಲಿಸಿದ್ದಾರೆ.

2. **<u>ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u>**

ದಾವಾ ಅನುಸೂಚಿ ಎ ಷೆಡ್ಯೂಲ್ ಸ್ವತ್ತುಗಳು ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಸರ್ವೆ.ನಂಬರಿಗೆ ಸೇರಿರುವ ಸ್ವತ್ತುಗಳಾಗಿರುತ್ತದೆ. ಸದರಿ ಸ್ವತ್ತುಗಳು ರಂಗಪ್ಪ ಎಂಬುವವರ ಹಕ್ಕು ಮತ್ತು ಸ್ವಾಧೀನಾನುಭವಕ್ಕೆ ಸೇರಿದ್ದು, ರಂಗಪ್ಪನು ವಾದಿ ಮತ್ತು 1 ರಿಂದ 5 ನೇ ಪ್ರತಿವಾದಿಯರ ಖಾಸಾ ತಂದೆಯಾಗಿರುತ್ತಾರೆ. ದಾವಾ ಸ್ವತ್ತುಗಳು ವಾದಿ ಮತ್ತು 1 ರಿಂದ 5 ನೇ ಪ್ರತಿವಾದಿಯರ ಪಿತ್ರಾರ್ಜಿತವಾದ ಸ್ವತ್ತಾಗಿದ್ದು, ವಾದಿ ಮತ್ತು ಪ್ರತಿವಾದಿಯರ ಜಂಟಿ ಹಕ್ಕು ಮತ್ತು ಸ್ವಾಧೀನಾನುಭವದಲ್ಲಿರುತ್ತದೆ. ರಂಗಪ್ಪನಿಗೆ ದಾವಾ ಸ್ವತ್ತುಗಳು ಅವರ ವಂಶಸ್ಥರಿಂದ ಬಂದಂತಹ ಸ್ವತ್ತಾಗಿರುತ್ತದೆ. ರಂಗಪ್ಪನು ಸುಮಾರು 15 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿಗೆ ಸರಿಯಾದ ವ್ಯವಹಾರ ಜ್ಞಾನ ಇರದೇ ಇದ್ದುದ್ದರಿಂದ, 2 ನೇ ಪ್ರತಿವಾದಿ ಒಟ್ಟು ಕುಟುಂಬದ ವ್ಯವಹಾರಗಳನ್ನು ಮನೆಯ ಯಜಮಾನನಾಗಿ ರೂಡಿಸಿಕೊಂಡು ಬರುತ್ತಿರುತ್ತಾರೆ. ದಾವಾ ಎ ಅನುಸೂಚಿ ಸ್ವತ್ತಿನ 3 ನೇ ಐಟಂ 2 ನೇ ಪ್ರತಿವಾದಿಯು ಒಟ್ಟು ಕುಟುಂಬದ ಯಜಮಾನರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಒಟ್ಟು ಕುಟುಂಬದ ಪರವಾಗಿ ಸರಕಾರದಿಂದ ಮಂಜೂರು ಮಾಡಿರುವಂತಹ ಸ್ವತ್ತಾಗಿರುತ್ತದೆ. ದಾವಾ ಅನುಸೂಚಿ ಎ ಸ್ವತ್ತಿನ 1 ಮತ್ತು 2 ನೇ ಐಟಂ ವಾದಿಯ ತಾಯಿಯಾದ ಜಯಮ್ಮಳ ಹೆಸರಿನಲ್ಲಿ ಖಾತೆಯಾಗಿರುತ್ತದೆ.

3. ದಾವಾ ಅನುಸೂಚಿ ಎ ಸ್ವತ್ತಿನ 4 ನೇ ಐಟಂ ನ್ನು ವಾದಿಯ ತಂದೆ ರಂಗಪ್ಪನು 20 ವರ್ಷಗಳ ಹಿಂದೆ ವಾದಿಯ ತಾಯಿ ಜಯಮ್ಮಳ ಹೆಸರಿಗೆ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ ಸ್ವತ್ತಾಗಿರುತ್ತದೆ. 6 ನೇ ಪ್ರತಿವಾದಿಯು ವಾದಿಯ ತಾಯಿ ಜಯಮ್ಮಳು ಮರಣ ಹೊಂದುವ ಒಂದು ವರ್ಷದ ಮುಂಚೆ ವಾದಿಯ ಗಮನಕ್ಕೆ ಬಾರದಂತೆ ಪತ್ರವನ್ನು ಬರೆಸಿಕೊಂಡಿರುತ್ತಾರೆ ಸದರಿ ಪತ್ರವು ವಾದಿಯನ್ನು ಯಾವುದೇ ರೀತಿಯಲ್ಲಿ ಬದ್ಧಪಡಿಸುವುದಿಲ್ಲ. ದಾವಾ ಅನಸೂಚಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತುಗಳಾದ್ದರಿಂದ ವಾದಿ ಮತ್ತು 1 ರಿಂದ 5 ನೇ ಪ್ರತಿವಾದಿಯರಿಗೆ ಸಮನಾದ ಹಕ್ಕಿರುತ್ತದೆ. 1 ನೇ ಪ್ರತಿವಾದಿಗೆ ದಾವಾ ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಗೆ ಬರಬೇಕಾಗಿರುವ ಹಿಸ್ಸೆಯನ್ನು ತಪ್ಪಿಸುವ ಪ್ರಯತ್ನದಲ್ಲಿರುತ್ತಾರೆ. ವಾದಿಗೆ ದಾವಾ ಅನುಸೂಚಿ ಸ್ವತ್ತಿನಲ್ಲಿ 1/6 ನೇ ಭಾಗವನ್ನು ನೀಡುವಂತೆ 2 ನೇ ಪ್ರತಿವಾದಿಯನ್ನು ಕೇಳಲಾಗಿ ಉಡಾಫೆಯ ಉತ್ತರ ನೀಡಿರುತ್ತಾರೆ. ಆದ್ದರಿಂದ ಅನ್ಯಮಾರ್ಗವಿಲ್ಲದೇ ವಾದಿಯು ದಾವಾ ಅನಸೂಚಿ ಸ್ವತ್ತಿನಲ್ಲಿ ತನಗಿರುವ ಭಾಗಾಂಶದ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿ ಡಿಕ್ರಿ ಮಾಡಲು ಕೋರಿಕೊಂಡಿದ್ದಾರೆ.

**4**. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಹೊರಡಿಸಿದ್ದು, ಸಮನ್ಸ್ ಜಾರಿಯಾಗಿದ್ದು, 2 ನೇ ಪ್ರತಿವಾದಿ ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಲಿಖಿತ ಹೇಳಿಕೆಯಲ್ಲಿ 2 ನೇ ಪ್ರತಿವಾದಿ ತಿಳಿಸುವುದೇನೆಂದರೆ, ವಾದಿಯು ಸಲ್ಲಿಸಿರುವ ದಾವೆಯು ಕಾನೂನು ವಿಧ್ಯಮಾನಗಳ ರೀತ್ಯಾ ನಿಲ್ಲತಕ್ಕದ್ದಲ್ಲ. ದಾವಾ ಪ್ಯಾರಾದ ಎಲ್ಲಾ ಸಂಗತಿಗಳನ್ನು 2 ನೇ ಪ್ರತಿವಾದಿ ಅಲ್ಲಗಳೆದಿರುತ್ತಾರೆ. ಮುಂದುವರೆದು 2 ನೇ ಪ್ರತಿವಾದಿ ತಿಳಿಸುವುದೇನೆಂದರೆ, ವಾದಿ ಮತ್ತು 1 ರಿಂದ 5 ನೇ ಪ್ರತಿವಾದಿಯ ತಂದೆಯಾದ ರಂಗಪ್ಪನವರಿಗೆ ವಾದಿಯು ಸೇರಿ 4 ಜನ ಹೆಣ್ಣು ಮಕ್ಕಳಿದ್ದು, ಹೆಣ್ಣು ಮಕ್ಕಳ ಮದುವೆಯನ್ನು ರಂಗಪ್ಪ, ಪ್ರತಿವಾದಿ 1 ಮತ್ತು 2 ರವರು ಸೇರಿ ಸಾಲ ಮಾಡಿ ಸಾಕಷ್ಟು ಖರ್ಚು ಮಾಡಿ ವಿವಾಹ ಮಾಡಿರುತ್ತಾರೆ. ರಂಗಪ್ಪನವರು ಮಾಡಿದ್ದ ಸಾಲವನ್ನು 1 ಮತ್ತು 2 ನೇ ಪ್ರತಿವಾದಿಯರು ಕಷ್ಟ ಪಟ್ಟು ತೀರಿಸಿರುತ್ತಾರೆ. ವಾದಿ ಮತ್ತು 1 ರಿಂದ 5 ನೇ ಪ್ರತಿವಾದಿಯರ ತಂದೆಯಾದ ರಂಗಪ್ಪನವರು ದಿಃ 25-06-1994 ರಂದು ಪಂಚಾಯತಿ ಪಾಲುಪಟ್ಟಿಯನ್ನು

ಮಾಡಿದ್ದು, ಸದರಿ ಪಾಲುಪಟ್ಟಿಯಂತೆ ದಾವಾ ಸಿ ಷೆಡ್ಯೂಲ್ ಸ್ವತ್ತಿನಲ್ಲಿರುವ ಐಟಂ ನಂ.2 ಸ್ವತ್ತುಗಳು 2 ನೇ ಪ್ರತಿವಾದಿಯ ಹಿಸ್ಸೆಗೂ ಮತ್ತು ಐಟಂ ನಂ.1 ಸ್ವತ್ತು 1 ನೇ ಪ್ರತಿವಾದಿಯ ಹಿಸ್ಸೆಗೂ ಬಂದಿರುತ್ತದೆ. 1 ಮತ್ತು 2 ನೇ ಪ್ರತಿವಾದಿ ಮತ್ತು ತಂದೆ ತಾಯಿಯಾದ ರಂಗಪ್ಪ, ಜಯಮ್ಮರವರು ಬೇರೆಯಾಗಿ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿರುತ್ತಾರೆ. ಸದರಿ ವಿಚಾರ ವಾದಿಗೆ ತಿಳಿದಿರುತ್ತದೆ. ಎ ಷೆಡ್ಯೂಲ್ ಸ್ವತ್ತು ರಂಗಪ್ಪನವರ ಸ್ವಯಾರ್ಜಿತವಾದ ಸ್ವತ್ತುಗಳಾಗಿದ್ದು, ಅವುಗಳನ್ನು ಅವರು ಕ್ರಯಕ್ಕೆ ಕೊಂಡುಕೊಂಡಿರುತ್ತಾರೆ ನಂತರ 2 ನೇ ಪ್ರತಿವಾದಿಗೆ ಸರ್ಕಾರದಿಂದ ದಿಃ 02-05-1997 ರಲ್ಲಿ ಸರ್ವೆ.ನಂ. 211 ರಲ್ಲಿ 3 ಎಕರೆ ಮಂಜೂರಾಗಿದ್ದು, ಸದರಿ ಮಂಜೂರಾತಿಗೆ 2 ನೇ ಪ್ರತಿವಾದಿಯು ತಾನು ಕಷ್ಟಪಟ್ಟು ದುಡಿದಂತಹ ಹಣವನ್ನು ಸರ್ಕಾರಕ್ಕೆ ಕಟ್ಟಿ ಜಮೀನಿನ ಮಂಜೂರು ಚೀಟಿಯನ್ನು ಪಡೆದುಕೊಂಡಿರುತ್ತಾರೆ.

5. 2 ನೇ ಪ್ರತಿವಾದಿಗೆ ಮಂಜೂರಾದ ಸ್ವತ್ತಿನಲ್ಲಿ ವಾದಿಗಾಗಲೀ, 1 ಮತ್ತು 3 ರಿಂದ 5 ನೇ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಸ್ವಾಧೀನ ಮಾಲೀಕತ್ವ ಇರುವುದಿಲ್ಲ. ದಾವಾ ಷೆಡ್ಯೂಲ್ ಎ ರಲ್ಲಿರುವ ಐಟಂ ನಂ.3 ರಲ್ಲಿನ ಸರ್ವೆ.ನಂ. 211 ಹೊಸ ಸರ್ವೆ.ನಂ. 221 ರಲ್ಲಿನ 3 ಎಕರೆ ಜಮೀನು, 2 ನೇ ಪ್ರತಿವಾದಿಯ ಸ್ವಯಾರ್ಜಿತವಾದ ಸ್ವತ್ತಾಗಿರುತ್ತದೆ. ವಾದಿ ಹಾಗೂ 1 ರಿಂದ 3 ನೇ ಪ್ರತಿವಾದಿಯ ತಂದೆ ರಂಗಪ್ಪನವರು ದಿಃ 09-05-1997 ರಂದು ಮರಣ ಹೊಂದಿದ್ದು, ಅವರ ಉತ್ತರ ಕ್ರಿಯಾದಿಗಳನ್ನು 1 ಮತ್ತು 2 ನೇ ಪ್ರತಿವಾದಿಯರೇ ನೆರವೇರಿಸಿರುತ್ತಾರೆ. ಜಯಮ್ಮನವರು ಮರಣ ಹೊಂದಿದ ನಂತರ ದಾವಾ ಷೆಡ್ಯೂಲ್ ಸ್ವತ್ತಿನ ಸಿ ರಲ್ಲಿನ ಐಟಂ ನಂ. 2 ರ ಸ್ವತ್ತು 2 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತವಾದ ಸ್ವತ್ತುಗಳಾಗಿರುವುದಿಲ್ಲ. ಸದರಿ ಸ್ವತ್ತುಗಳು ವಾದಿಯ ತಂದೆಯಾದ ರಂಗಪ್ಪನವರು ಕೊಂಡು ಕೊಂಡಂತಹ ಸ್ವತ್ತಾಗಿರುತ್ತದೆ. ವಾದಿ ಸದರಿ ಸ್ವತ್ತಿನಲ್ಲಿ ಯಾವುದೇ ಹಿಸ್ಸೆಯನ್ನು ಪಡೆಯುವ ಹಕ್ಕು ಇರುವುದಿಲ್ಲ.

6. 3 ಮತ್ತು 4 ನೇ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸುವುದೇನೆಂದರೆ, ದಾವಾ ಪ್ಯಾರಾ 2 ರಿಂದ 4 ನೇ ಕಂಡಿಕೆಯಲ್ಲಿರುವ ಸಂಗತಿಗಳನ್ನು ಒಪ್ಪಿಕೊಂಡಿರುತ್ತಾರೆ. ಮುಂದುವರೆದು 3 ಮತ್ತು 4 ನೇ ಪ್ರತಿವಾದಿ ತಿಳಿಸುವುದೇನೆಂದರೆ, ವಾದಿಯು ವಾದ ಪತ್ರದಲ್ಲಿ ಹೇಳಿರುವ ಅಂಶಗಳೆಲ್ಲ ಸತ್ಯವಾಗಿರುತ್ತದೆ ಎಂದು

ಒಪ್ಪಿಕೊಳ್ಳುತ್ತೇವೆ. ನಾವುಗಳು ದಾವಾ ಶುಲ್ಕ ಕಟ್ಟಲು ಬದ್ಧರಾಗಿದ್ದು ದಾವಾ ಅನುಸೂಚಿ ಸ್ವತ್ತಿನಲ್ಲಿ 3 ಮತ್ತು 4 ನೇ ಪ್ರತಿವಾದಿಯರಿಗೂ ಸಮಾನ ಭಾಗಾಂಶ ಬರಬೇಕಾಗಿರುತ್ತದೆ. 3 ಮತ್ತು 4 ನೇ ಪ್ರತಿವಾದಿಗಳಿಗೆ ದಾವಾ ಅನುಸೂಚಿ ಸ್ವತ್ತಿನಲ್ಲಿ 2/6 ಭಾಗಾಂಶವನ್ನು ನೀಡಬೇಕಾಗಿ ತಿಳಿಸಿರುತ್ತಾರೆ.

7. 6 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಪ್ಯಾರಾದ ಎಲ್ಲಾ ಸಂಗತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು 6 ನೇ ಪ್ರತಿವಾದಿ ತಿಳಿಸುವುದೇನೆಂದರೆ, ದಾವಾ ಐಟಂ ನಂ. 4 ರ ಸ್ವತ್ತು ಮೊದಲಿಗೆ ರಾಮಣ್ಣ ಬಿನ್ ಕಾಳಪ್ಪ ಎಂಬುವವರಿಗೆ ಸೇರಿದ್ದು ಅದನ್ನು ವಾದಿಯ ತಾಯಿಗೆ 11,000/- ರೂಗಳಿಗೆ ಮಾರಾಟ ಮಾಡಿರುತ್ತಾರೆ. ವಾದಿಯ ತಾಯಿ ರಂಗಮ್ಮ ತಿಳಿಸಿದಂತೆ ಆಕೆಯ ತಾಯಿಯ ಮನೆಯವರು ಸದರಿ ಸ್ವತ್ತನ್ನು ಖರೀದಿಸಿ ಜಯಮ್ಮನ ಹೆಸರಿಗೆ ಬರೆಸಿರುತ್ತಾರೆ. ವಾದಿಯ ಗಂಡನೇ ಖರೀದಿಸಿದ್ದರೆ ಸದರಿ ಕ್ರಯಪತ್ರವನ್ನು ಆತನೇ ಬರೆಸಿಕೊಳ್ಳುತ್ತಿದ್ದನು. ಆದ್ದರಿಂದ ದಾವಾ ಐಟಂ ನಂ . 4 ರ ಸ್ವತ್ತು ಜಯಮ್ಮಳ ಸ್ವಯಾರ್ಜಿತ ಆಸ್ತಿಯಾಗಿದ್ದು ಅವಳು ಸದರಿ ಜಮೀನನ್ನು 2 ನೇ ಪ್ರತಿವಾದಿಯಾದ ಆತನ ಮಗನು ಚೆನ್ನಾಗಿ ನೋಡಿಕೊಳ್ಳುತ್ತಾನೆಂದು ಭಾವಿಸಿ ಆತನ ಹೆಂಡತಿ ಮೀನಾಕ್ಷಿ ಎಂದರೆ ಜಯಮ್ಮಳ ಸೊಸೆ ಹೆಸರಿಗೆ ದಿಃ 25-11-1995 ರಂದು ನೋಂದಾಯಿತ ವಿಲ್ ಪತ್ರ ಮಾಡಿದ್ದಳು ಆದರೆ ಅವರುಗಳು ಜಯಮ್ಮಳನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಸದರಿ ವಿಲ್ ಪತ್ರವನ್ನು ದಿಃ 15-07-2005 ರಂದು ವಜಾ ಮಾಡಿರುವ ವಿಚಾರ ವಾದಿಗೆ ಗೊತ್ತಿರುತ್ತದೆ. ನಂತರ 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿಯಾದ ಮೀನಾಕ್ಷಿ ಮತ್ತು ವಾದಿ ಮತ್ತು ವಾದಿಯ ತಂದೆಯ ಸರಿಯಾಗಿ ನೋಡಿಕೊಳ್ಳದೇ ಇದ್ದುದ್ದರಿಂದ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ತಿಳಿಸಿದ್ದರಿಂದ ದಿಃ 15-09-2005 ರಂದು ಅಂದಿನ ಮಾರುಕಟ್ಟೆ ಬೆಲೆಗೆ ಖರೀದಿಸಿದ್ದು, ಸದರಿ ಪತ್ರಕ್ಕೆ 2 ನೇ ಪ್ರತಿವಾದಿಯು ಸಾಕ್ಷಿದಾರನಾಗಿರುತ್ತಾನೆ. ದಾವಾ ಐಟಂ ನಂ. 4 ರ ಸ್ವತ್ತನ್ನು ಖರೀದಿಸುವ ಮೊದಲು ಅದರ ಬಗ್ಗೆ ವಿಚಾರಿಸಿ ಅದು ಜಯಮ್ಮಳ ಸ್ವಂತ ಆಸ್ತಿ ಎಂದು ತಿಳಿದ ಮೇಲೆ ಮತ್ತು ವಿಲ್ ಪತ್ರ ವಜಾ ಆದ ನಂತರ ಖರೀದಿಸಿದ್ದು, ಈ ವಿಚಾರ ವಾದಿ ಮತ್ತು 2 ನೇ ಪ್ರತಿವಾದಿಗೆ ಮತ್ತು 1 ರಿಂದ 5 ನೇ ಪ್ರತಿವಾದಿಗಳಿಗೆ ಗೊತ್ತಿದ್ದರೂ ಸಹಾ 6 ನೇ ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸಬೇಕೆಂದು ಪರಸ್ಪರ ಷರೀಖಾಗಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಐಟಂ ಇತರ ಸ್ವತ್ತಿನ ಬಗ್ಗೆ ನನ್ನ ತಕರಾರು ಇರುವುದಿಲ್ಲ. 6 ನೇ ಪ್ರತಿವಾದಿ ದಾವಾ ಐಟಂ ನಂ. 4 ರ ಸ್ವತ್ತಿನ ಕಾನೂನುಬದ್ಧ ಹಕ್ಕುದಾರನಾಗಿ ಸ್ವಾಧೀನದಲ್ಲಿದ್ದು ಅದನ್ನು

ಅಭಿವೃದ್ಧಿಪಡಿಸಿರುತ್ತಾನೆ. ಆದ್ದರಿಂದ ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚಿನೊಂದಿಗೆ ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

8. ವಾದಪತ್ರ ಹಾಗೂ ಪ್ರತಿವಾದ ಪತ್ರದ ಸಂಗತಿಗಳ ಆಧಾರದ ಮೇಲೆ ಹಿಂದಿನ ಪೀಠಾಧಿಕಾರಿಯವರು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

## ವಿವಾದಾಂಶಗಳು

**1. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿ 1 ರಿಂದ 5 ರವರ ಒಟ್ಟು ಕುಟುಂಬದ ಸ್ವತ್ತುಗಳೆಂದು ರುಜುವಾತುಪಡಿಸುತ್ತಾರೆಯೆ?**

**2. ದಾವಾ ಸ್ವತ್ತುಗಳಲ್ಲಿ ವಾದಿಯು 1/6 ನೇ ಭಾಗದ ಹಿಸ್ಸಾ ಹಕ್ಕನ್ನು ಪಡೆಯಲು ಅರ್ಹರೇ ?**

**3. ವಾದಿಯು ದಾವಾ ಎ ಷೆಡ್ಯೂಲ್ ಸ್ವತ್ತಿನ ಐಟಂ ನಂ. 4 ನ್ನು 6 ನೇ ಪ್ರತಿವಾದಿಗೆ ಕ್ರಯಪತ್ರದ ಮೂಲಕ ಬರೆದು ಕೊಟ್ಟಿರುವುದು ವಾದಿಯನ್ನು ಬದ್ಧಪಡಿಸುವುದಿಲ್ಲ ಎಂದು ರುಜುವಾತುಪಡಿಸುತ್ತಾರೆಯೇ ?**

**4 . 6 ನೇ ಪ್ರತಿವಾದಿಯು ದಾವಾ ಐಟಂ ನಂ. 4 ಸ್ವತ್ತಿನ ಬೋನಾಫೈಡ್ ಪರ್ಚೇಸರಾ ?**

**5. ದಾವೆಯು ಕಾಲಪರಿಮಿತಿಯಿಂದ ಕೂಡಿದೆಯೆ?**

**6. ವಾದಿಯು ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹರೇ ?**

**7. ಯಾವ ಆದೇಶ?**

## ಹೆಚ್ಚುವರಿ ವಿವಾದಾಂಶ

**1. 2 ನೇ ಪ್ರತಿವಾದಿಯು ದಾವಾ ಐಟಂ ನಂ. 3 ಸ್ವಯಾರ್ಜಿತ ಸ್ವತ್ತು ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?**

**2. 2 ನೇ ಪ್ರತಿವಾದಿಯು ದಾವಾ ಬಿ.ಸಿ ಷೆಡ್ಯೂಲ್ ಸ್ವತ್ತುಗಳು ವಾದಿಯ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದು 2 ನೇ ಪ್ರತಿವಾದಿಗೆ ಪಾಲು ಪಟ್ಟಿ ಮೂಲಕ ಬಂದಿದೆ**

ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?

9. ವಾದಿಯು ತನ್ನ ದಾವೆಯನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ನುಡಿ ಸಾಕ್ಷ್ಯ ಮಾಡಿಸಿಕೊಂಡಿರುತ್ತಾರೆ. ದಾಖಲೆಗಳನ್ನು ನಿಶಾನೆ ಪಿ-1 ರಿಂದ 10 ಎಂದು ಗುರುತಿಸಿಕೊಂಡಿರುತ್ತಾರೆ. ವಾದಿಯರ ಪರ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುತ್ತಾರೆ.

10. 6 ನೇ ಪ್ರತಿವಾದಿ ತನ್ನ ಪ್ರತಿವಾದವನ್ನು ರುಜುವಾತುಪಡಿಸಲು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು , ತನ್ನ ಪರ ರವೀಶ್‌ರವರನ್ನು ಡಿ.ಡಬ್ಲ್ಯೂ-2 ಎಂದು, ನಾಗರಾಜು ರವರನ್ನು ಡಿ.ಡಬ್ಲ್ಯೂ-3 ಎಂದು ನುಡಿಸಾಕ್ಷ್ಯ ಮಾಡಿಸಿಕೊಂಡಿರುತ್ತಾರೆ. ದಾಖಲೆಗಳನ್ನು ನಿಶಾನೆ ಪಿ-1 ರಿಂದ 13 ಎಂದು ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಯರ ಪರ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುತ್ತಾರೆ.

11. ವಾದಿಯ ಪರ ವಕೀಲರ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಲಾಗಿದೆ. ಸಮಗ್ರ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

12. ಮೇಲ್ಕಂಡ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

1 ನೇ ವಿವಾದಾಂಶ : **ನಕಾರಾತ್ಮಕವಾಗಿ**

ಹೆಚ್ಚುವರಿ ವಿವಾದಾಂಶ 1 : **ಸಕಾರಾತ್ಮಕವಾಗಿ**

ಹೆಚ್ಚುವರಿ ವಿವಾದಾಂಶ 2 : **ನಕಾರಾತ್ಮಕವಾಗಿ**

2 ನೇ ವಿವಾದಾಂಶ : **ಭಾಗಶಃ ಸಕಾರಾತ್ಮಕವಾಗಿ**

3 ನೇ ವಿವಾದಾಂಶ : **ನಕಾರಾತ್ಮಕವಾಗಿ**

4 ನೇ ವಿವಾದಾಂಶ **: ಸಕಾರಾತ್ಮಕವಾಗಿ**

5 ನೇ ವಿವಾದಾಂಶ **: ನಕಾರಾತ್ಮಕವಾಗಿ**

6 ನೇ ವಿವಾದಾಂಶ **: ಭಾಗಶಃ ಸಕಾರಾತ್ಮಕವಾಗಿ**

7 ನೇ ವಿವಾದಾಂಶ : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

-**ಕಾರಣಗಳುಃ**-

13. **ವಿವಾದಾಂಶಃ 1 ರಿಂದ 6 ಮತ್ತು ಹೆಚ್ಚುವರಿ ವಿವಾದಾಂಶ 1 ಮತ್ತು 2 :** ಈ ಎಲ್ಲಾ ಅಂಶಗಳ ಮೇಲಿನ ಚರ್ಚೆಯು ಒಂದಕ್ಕೊಂದು ಅವಲಂಬಿತವಾಗಿರುವುದರಿಂದ, ವಾಕ್ಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಇಲ್ಲಿ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

14. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿ 1 ರಿಂದ 5 ರವರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ವಾದಿಯ ತಂದೆ ರಂಗಪ್ಪರವರಿಗೆ ಅವರ ವಂಶಸ್ಥರಿಂದ ಬಂದ ಸ್ವತ್ತುಗಳಾಗಿರುತ್ತದೆ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿ 1 ರಿಂದ 5 ರವರ ಜಂಟಿ ಹಕ್ಕು ಮತ್ತು ಸ್ವಾಧೀನಾನುಭವದಲ್ಲಿರುತ್ತದೆ. 1 ನೇ ಪ್ರತಿವಾದಿಗೆ ವ್ಯವಹಾರ ಜ್ಞಾನ ಇಲ್ಲದ ಕಾರಣ 2 ನೇ ಪ್ರತಿವಾದಿಯು ತಂದೆ ರಂಗಪ್ಪನ ಮರಣಾ ನಂತರ ಕುಟುಂಬದ ವ್ಯವಹಾರಗಳನ್ನು ನೋಡಿಕೊಂಡು ಬರುತ್ತಿರುತ್ತಾರೆ. 2 ನೇ ಪ್ರತಿವಾದಿ ಕುಟುಂಬದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾಗ, ದಾವಾ ಎ ಅನುಸೂಚಿ ಸ್ವತ್ತಿನ 3 ನೇ ಐಟಂ ಕುಟುಂಬದ ಪರವಾಗಿ 2 ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆ. ಐಟಂ ನಂ. 1 ಮತ್ತು 2 ಸ್ವತ್ತುಗಳು ವಾದಿಯ ತಾಯಿಯ ಹೆಸರಿನಲ್ಲಿರುತ್ತದೆ. 6 ನೇ ಪ್ರತಿವಾದಿ ವಾದಿಯ ಗಮನಕ್ಕೆ ಬಾರದಂತೆ ಅವರ ತಾಯಿ ಜಯಮ್ಮಳಿಗೆ ಮೋಸ ಮಾಡಿ ಕ್ರಯಪತ್ರವನ್ನು ಬರೆಸಿಕೊಂಡಿರುತ್ತಾರೆ.

15. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ಯಾವ ವ್ಯಕ್ತಿ ತಾನು ಹೇಳಿದ ವಾಸ್ತವಿಕತೆಗಳ ಅಸ್ತಿತ್ವದ ಮೇಲೆ ಅವಲಂಬಿಸಿರುವ ಯಾವುದೇ ಕಾನೂನು ಸಮ್ಮತ ಅಧಿಕಾರ ಭಾಧ್ಯತೆಯ ಬಗ್ಗೆ ನ್ಯಾಯಾಲಯವು ತೀರ್ಪು ಕೊಡಬೇಕೆಂದು ಇಚ್ಚಿಸುತ್ತಾನೋ ಆ ವ್ಯಕ್ತಿ ಅಂತಹ ವಾಸ್ತವಿಕತೆಗಳು ಅಸ್ತಿತ್ವದಲ್ಲಿದೆ ಎಂದು ಸಾಭೀತುಮಾಡತಕ್ಕದ್ದು. ವಾದಿಯು ತಮ್ಮ ಪರವಾಗಿ ಡಿಕ್ರಿ ಮಾಡಬೇಕೆಂದು ಕೋರಿ ಈ ದಾವೆಯನ್ನು ಸಲ್ಲಿಸಿರುವುದರಿಂದ, ತಮ್ಮ ಮೇಲೆ ಇರುವ ರುಜುವಾತಿನ ಭಾರವನ್ನು ವಾದಿಯರೇ ನಿರೂಪಿಸತಕ್ಕದ್ದು. ವಾದಿಯು ತಮ್ಮ ದಾವೆಯನ್ನು ಯಾವ ರೀತಿ ರುಜುವಾತು ಪಡಿಸಿದ್ದಾರೆ ಎಂಬುದನ್ನು ಪರಿಶೀಲಿಸಬೇಕಾಗಿದೆ.

16. ವಾದಿ ಪರ ಸಾಕ್ಷಿ 1 ರವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿರುವ ಅಂಶಗಳನ್ನು ಪುನರ್ ಉಚ್ಚರಿಸಿರುತ್ತಾರೆ. ನಿಶಾನೆ ಪಿ-1, 6,7 ಪಹಣಿಯಾಗಿದ್ದು , ದಾವಾ ಐಟಂ ನಂ. 1, 2 ವಾದಿಯ ತಾಯಿಯ ಹೆಸರಿನಲ್ಲಿರುತ್ತದೆ. ನಿಪಿ-3, 5 ಪಹಣಿಯಾಗಿದ್ದು ದಾವಾ ಐಟಂ ನಂ. 3, 2 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಪಿ-4 ಪಹಣಿಯಾಗಿದ್ದು ದಾವಾ ಐಟಂ ನಂ. 4, 6 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಪಿ-8 ಎಂ.ಆರ್ ಆಗಿರುತ್ತದೆ. ನಿಪಿ- 9, 10 ಆಸ್ತಿ ತೆರಿಗೆ ರಿಜಿಸ್ಟರ್ ಆಗಿರುತ್ತದೆ .

17. 6 ನೇ ಪ್ರತಿವಾದಿ ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು 2 ನೇ ಪ್ರತಿವಾದಿ ತನ್ನನ್ನು ತಾನು ಡಿ.ಡಬ್ಲ್ಯೂ-2 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಡಿ.ಡಬ್ಲ್ಯೂ-1 ರಿಂದ 13 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ನಿಡಿ- 1 ಮೂಲ ಕ್ರಯಪತ್ರವಾಗಿದ್ದು ದಿಃ15-07-2005 ರಂದು 6 ನೇ ಪ್ರತಿವಾದಿ ವಾದಿಯ ತಾಯಿ ಜಯಮ್ಮರಿಂದ ಎ ಷೆಡ್ಯೂಲ್ ಸ್ವತ್ತಿನ ಐಟಂ ನಂ. 4 ಸ್ವತ್ತನ್ನು ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುವುದು ಕಂಡು ಬರುತ್ತದೆ. ನಿಡಿ-2 ವಿಲ್ ರದ್ದಿಯಾತಿ ಪತ್ರವಾಗಿದ್ದು ದಿಃ25-11-1995 ರಂದು ವಾದಿಯ ತಾಯಿ ಜಯಮ್ಮ 2 ನೇ ಪ್ರತಿವಾದಿಯ ಹೆಂಡತಿ ಮೀನಾಕ್ಷಿ ರವರಿಗೆ ದಾವಾ ಎ ಷೆಡ್ಯೂಲ್ ಸ್ವತ್ತಿನ ಐಟಂ ನಂ. 4 ನ್ನು ಮರಣ ಶಾಸನ ಬರೆದಿದ್ದು, ಜಯಮ್ಮಳ ಸೊಸೆ ಮೀನಾಕ್ಷಿ ಜಯಮ್ಮಳನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ದಿಃ 15-07-2005 ರಂದು ಮೀನಾಕ್ಷಿಯ ಹೆಸರಿಗೆ ಬರೆದಿರುವ ಮರಣ ಶಾಸನವನ್ನು ರದ್ದು ಪಡಿಸಿರುತ್ತಾರೆ. ನಿಡಿ-3 ದಿಃ 25-11-1995 ರ ಮರಣಶಾಸನವಾಗಿರುತ್ತದೆ. ನಿಡಿ-4 ದಿಃ 05-12-1988 ರ ಕ್ರಯಪತ್ರವಾಗಿದ್ದು, ಅದನು ಪರಿಶೀಲಿಸಲಾಗಿ ವಾದಿಯ ತಾಯಿ ಜಯಮ್ಮರವರಿಗೆ ಬೈರನಾಯಕನಹಳ್ಳಿಯಲ್ಲಿರುವ ಕಾಳಪ್ಪನ ಮಗ ರಾಮಣ್ಣನು ದಾವಾ ಎ ಷೆಡ್ಯೂಲ್ ಐಟಂ ನಂ. 4 ರ ಸ್ವತ್ತನ್ನು ನೋಂದಾಯಿತ ಕ್ರಯಪತ್ರದ ಮೂಲಕ ಬರೆದುಕೊಟ್ಟಿರುವುದು ಕಂಡು ಬರುತ್ತದೆ ನಿಡಿ-5 ಪಹಣಿಯಾಗಿದ್ದು, ದಾವಾ ಐಟಂ ನಂ.4 ವಾದಿಯ ತಾಯಿಯ ಹೆಸರಿನಲ್ಲಿರುತ್ತದೆ. ನಿಡಿ-6 ಪಹಣಿಯಾಗಿದ್ದು ದಾವಾ ಐಟಂ 4, 6 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಡಿ-7 ಎಂ.ಆರ್ ಆಗಿದ್ದು ಜಯಮ್ಮರ ಹೆಸರಿನಲ್ಲಿರುತ್ತದೆ. ನಿಡಿ-8 ಎಂ.ಆರ್. ಆಗಿದ್ದು, 6 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಡಿ-9 ಋಣಭಾರರಾಹಿತ್ಯ ಪ್ರಮಾಣ ಪತ್ರವಾಗಿದ್ದು ವಾದಿಯ ತಾಯಿ ಜಯಮ್ಮಳ ಹೆಸರಿನಲ್ಲಿರುತ್ತದೆ ನಿಡಿ-10 ದೃಢೀಕೃತ ಕ್ರಯಪತ್ರವಾಗಿದ್ದು, ದಿಃ 03-12-1975 ರಂದು ಸರ್ವೆ.ನಂ. 127/2 ರಲ್ಲಿ 2 ಎಕರೆ 36 ಗುಂಟೆ ಸ್ವತ್ತನ್ನು ವಾದಿಯ ತಂದೆ ದಾವಾ ಐಟಂ ನಂ. 1 ನ್ನು

ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುವುದು ಕಂಡು ಬರುತ್ತದೆ ನಿಡಿ-11 ದೃಢೀಕೃತ ಗ್ರ್ಯಾಂಟ್ ಸರ್ಟಿಫಿಕೇಟ್ 2 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಡಿ-13 ನೋಂದಾವಣೆಯಾಗದ ದಿಃ 25-06-1994 ರ ಪಾಲುಪಟ್ಟಿಯಾಗಿರುತ್ತದೆ. ದಾವಾ ಎ ಷೆಡ್ಯೂಲ್ ಸ್ವತ್ತಿನ ದಾವಾ ಐಟಂ ನಂ. 4 ನ್ನು ವಾದಿಯ ತಾಯಿ ಜಯಮ್ಮ ದಿಃ 05-12-1988 ನೇ ಇಸವಿಯಲ್ಲಿ ಕಾಳಪ್ಪನವರ ಮಗ ರಾಮಣ್ಣರವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುವುದು ನಿಡಿ-4 ದಾಖಲೆಯಲ್ಲಿ ಕಂಡು ಬರುತ್ತದೆ.

18. ಈ ಹಂತದಲ್ಲಿ ನಾನು ಹಿಂದೂ ವಾರಸ ಕಾಯ್ದೆ ಕಲಂ 14 ನ್ನು ಉಲ್ಲೇಖಪಡಿಸಬಯಸುತ್ತೇನೆ .

***ಒಬ್ಬ ಹಿಂದೂ ನಾರಿಯ ಪಡೆದಿರುವ ಯಾವತ್ತೂ ಸ್ವತ್ತು ಅದು ಈ ಅಧಿನಿಯಮವು ಆರಂಭವಾಗುವುದಕ್ಕಿಂತ ಮೊದಲು ಪಡೆದದ್ದಿರಲಿ ಅಥವಾ ಬಳಿಕ ಅದು ಅವಳಿಂದ ಪೂರ್ಣ ಸ್ವಾಮಿಯಾಗಿ ಇಟ್ಟುಕೊಳ್ಳಲ್ಪಡುವುದಲ್ಲದೆ ನಿಯಮಿತ ಸ್ವಾಮಿಯಾಗಿ ಅಲ್ಲ.***

***ವಿವರಣೆಃ ಒಬ್ಬ ಹಿಂದೂ ನಾರಿಯು ವಾರಸು ಪಡೆದು ವೃತ್ತಿಯಿಂದ ಅಥವಾ ವಿಭಜನೆಯಲ್ಲಿ ಅಥವಾ ಜೀವನಾಂಶದ ಬದಲಾಗಿ ಅಥವಾ ಜೀವನಾಂಶದ ಹಳೇ ಬಾಕಿಗಾಗಿ ಅಥವಾ ಯಾವನಾದರೊಬ್ಬ ವೃತ್ತಿಯಿಂದ ಉಡುಗೊರೆಯಾಗಿ ಅವನು ಸಂಬಂಧಿಕನಿರಲಿ ಅಧ,ವಾ ಇಲ್ಲದಿರಲಿ ವಿವಾಹ ಪೂರ್ವದಲ್ಲಿ ಅಥವಾ ಪೂರ್ವ ಕಾಲದಲ್ಲಿ ಅಥವಾ ಬಳಿಕ, ಅವಳ ಸ್ವಂತ ಕಲೆ ಅಥವಾ ಶ್ರಮದಿಂದ ಅಥವಾ ಖರೀದಿ ಅಥವಾ ಚಿರಬೋಗದಿಂದ ಅಥವಾ ಇತರ ಯಾವುದೇ ರೀತಿಯಿಂದ ಮತ್ತು ಈ ಅಧಿನಿಯಮವು ಆರಂಭವಾಗುವ ತಕ್ಷಣ ಪೂರ್ವದಲ್ಲಿ ಸ್ತ್ರೀಧನವೆಂದು ಅವಳಲ್ಲಿರುವ ಸ್ವತ್ತು ಈ ಉಪಕಲಮಿನ ಸ್ವತ್ತು ಒಳಗೊಂಡಿರುತ್ತದೆ .***

19. ಮೇಲೆ ಉಲ್ಲೇಖಪಡಿಸಿರುವ ಕಲಂನ ಅನ್ವಯ ದಾವಾ ಸ್ವತ್ತು ವಾದಿಯ ತಾಯಿ ಜಯಮ್ಮಳ ಸ್ವಯಾರ್ಜಿತ ಸ್ವತ್ತಾಗಿರುತ್ತದೆ. ಆಕೆಯು ತನ್ನ ದರದ್ದು ನಿಮಿತ್ತ ದಾವಾ ಐಟಂ ನಂ. 4 ನ್ನು ದಿಃ 15-07-2005 ರಂದು 6 ನೇ ಪ್ರತಿವಾದಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದು ಕಂಡು ಬರುತ್ತದೆ .

ದಾವಾ ಐಟಂ ನಂ. 1 ಮತ್ತು 2 ನ್ನು ವಾದಿಯ ತಂದೆ ದಿಃ 03-12-1975 ನೇ ಇಸವಿಯಲ್ಲಿ ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುವುದು ಕಂಡು ಬರುತ್ತದೆ ವಾದಿಯ ತಂದೆ ದಿಃ 09-05-1997 ರಲ್ಲಿ ಮರಣ ಹೊಂದಿದ ನಂತರ ವಾದಿಯ ತಾಯಿ ಜಯಮ್ಮರ ಹೆಸರಿಗೆ ದಾವಾ ಐಟಂ ನಂ 1 ಮತ್ತು 2 ಪೌತಿ ಖಾತೆಯಾಗಿರುವುದು ನಿಪಿ-1, 2 6, 7 ಪಹಣಿಗಳಲ್ಲಿ ಮತ್ತು ನಿಪಿ-8 ಎಂ.ಆರ್ ದಾಖಲೆಯಲ್ಲಿ ಕಂಡು ಬರುತ್ತದೆ.

20. 2 ನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಐಟಂ ನಂ.3 ಸ್ವತ್ತು 2 ನೇ ಪ್ರತಿವಾದಿಗೆ ಸರ್ಕಾರದಿಂದ ದಿಃ 02-05-1997 ರಲ್ಲಿ ಮಂಜೂರಾಗಿರುತ್ತದೆ. ಸದರಿ ಮಂಜೂರಾತಿಗೆ 2 ನೇ ಪ್ರತಿವಾದಿಯು ಸರ್ಕಾರಕ್ಕೆ ಹಣ ಪಾವತಿಸಿ ಮಂಜೂರು ಚೀಟಿಯನ್ನು ಪಡೆದಿರುತ್ತಾರೆ. ಆದ್ದರಿಂದ ವಾದಿಗಾಗಲೀ, ಪ್ರತಿವಾದಿ 1, 3 ರಿಂದ 5 ರವರಿಗಾಗಲೀ ಈ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನವಿರುವುದಿಲ್ಲ ಎಂದು ತಿಳಿಸಿರುತ್ತಾರೆ. 2 ನೇ ಪ್ರತಿವಾದಿಯು ಹಾಜರುಪಡಿಸಿರುವ ನಿಡಿ-11 ದೃಢೀಕೃತ ಗ್ರ್ಯಾಂಟ್ ಸರ್ಟಿಫಿಕೇಟ್ ಆಗಿದ್ದು ಅದನ್ನು ಪರಿಶೀಲಿಸಲಾಗಿ ದಾವಾ ಐಟಂ ನಂ. 3 ನ್ನು ಸರ್ಕಾರದಿಂದ ದಿಃ 02-05-1997 ರಲ್ಲಿ 2 ನೇ ಪ್ರತಿವಾದಿಗೆ ಮಂಜೂರು ಮಾಡಿರುವುದು ಕಂಡು ಬರುತ್ತದೆ. ಅದರಂತೆ ದಾವಾ ಐಟಂ. ನಂ. 3 2 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುವುದು ನಿಪಿ-3 ಮತ್ತು 5 ದಾಖಲೆಯಲ್ಲಿ ಕಂಡು ಬರುತ್ತದೆ.

21. ವಾದಿಯು ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ 2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಬಿ ಮತ್ತು ಸಿ ಷೆಡ್ಯೂಲ್ ಸ್ವತ್ತುಗಳು ಅವರ ತಂದೆಯ ಸ್ವಯಾರ್ಜಿತ ಸ್ವತುಗಳಾಗಿದ್ದು ತಂದೆ ಬದುಕಿದ್ದಾಗಲೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಗೆ ದಿಃ 25-06-1994 ರಂದು ಪಂಚಾಯತಿ ಪಾಲು ಪಟ್ಟಿ ಮೂಲಕ ದಾವಾ ಬಿ ಮತ್ತು ಸಿ ಷೆಡ್ಯೂಲ್ ಸ್ವತ್ತುಗಳನ್ನು ಹಂಚಿಕೆ ಮಾಡಿರುತ್ತಾರೆ. ಈ ಸ್ವತ್ತುಗಳು ವಾದಿಯ ತಂದೆ ರಂಗಪ್ಪನವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದು, ವಾದಿ ಮತ್ತು ಪ್ರತಿವಾದಿ 3 ರಿಂದ 5 ರವರಿಗೆ ಈ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. 2 ನೇ ಪ್ರತಿವಾದಿಯು ಹಾಜರುಪಡಿಸಿರುವ ನಿಡಿ-12 ನೋಂದಾವಣೆಯಾಗದ ಪಾಲುಪಟ್ಟಿಯನ್ನು ಪರಿಶೀಲಿಸಲಾಗಿ, ದಾವಾ ಬಿ, ಸಿ ಷೆಡ್ಯೂಲ್ ಸ್ವತ್ತುಗಳನ್ನು ಪ್ರತಿವಾದಿ 1 ಮತ್ತು 2 ರವರು ದಿಃ

25-06-1994 ರಂದು ಪಾಲುಪಟ್ಟಿ ಮೂಲಕ ಹಂಚಿಕೆ ಮಾಡಿಕೊಂಡಿರುವಂತೆ ಕಂಡು ಬರುತ್ತದೆ ಸದರಿ ದಾಖಲೆಯು ನೋಂದಾವಣೆಯಾಗಿರುವುದಿಲ್ಲ. ಸದರಿ ಪಾಲು ಪಟ್ಟಿಯಲ್ಲಿ ವಾದಿಯಾಗಲೀ, ಪ್ರತಿವಾದಿ 3 ರಿಂದ 5 ರವರಾಗಲೀ ಹಿಸ್ಸೆಯನ್ನು ನೀಡಿರುವುದಿಲ್ಲ ಮತ್ತು ಸಹಿಯನ್ನು ಪಡೆದಿರುವುದಿಲ್ಲ ದಾವಾ ಐಟಂ ನಂ. 1 ಮತ್ತು 2 ಮತ್ತು ಬಿ ಸಿ ಷೆಡ್ಯೂಲ್ ನಲ್ಲಿರುವ ಸ್ವತ್ತುಗಳು ವಾದಿಯ ತಂದೆ ರಂಗಪ್ಪನವರ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತದೆ ಎಂದು 2 ನೇ ಪ್ರತಿವಾದಿ ಒಪ್ಪಿಕೊಂಡಿರುತ್ತಾರೆ.

**22. ಹಿಂದೂ ವಾರಸ ಕಾಯ್ದೆ ಕಲಂ 8 ಪುರುಷರ ಉತ್ತರಾಧಿಕಾರದ ಸಂಬಂಧ ಸಾಮಾನ್ಯ ನಿಯಮಗಳು**

***ಸ್ವತ್ತಿನ ಸೂಕ್ತ ವಿಲೇವಾರಿ ಮಾಡದೇ ಮೃತ ಹೊಂದಿದ ಹಿಂದೂ ಪುರಷರ ಸ್ವತ್ತುಗಳು ಈ ಅಧ್ಯಾಯದ ಉಪಬಂಧಗಳಿಗೆ ಅನುಗುಣವಾಗಿ ವಹಿಸಲ್ಪಡುತ್ತದೆ.***

***(ಎ) ಮೊದಲನೇಯದಾಗಿ, ಕೋಷ್ಟಕದ 1 ನೇ ವರ್ಗದಲಿಲ ನಿರ್ಧಿಷ್ಟ ಪಡಿಸಿದ ವಾರಸುದಾರರೆಂದು ಪರಿಗಣಿಸಲ್ಪಡುವ ಸಂಬಂಧಿಗಳಿಗೆಃ***

***ಬಿ) ಎರಡನೇಯದಾಗಿ, ಒಂದು ವೇಳೆ 1 ನೇ ವರ್ಗದ ವಾರಸುದಾರರು ಇಲ್ಲದೇ ಇದ್ದ ಪಕ್ಷದಲ್ಲಿ ಕೋಷ್ಟಕದ 11 ನೇ ವರ್ಗದಲ್ಲಿ ನಿರ್ಧಿಷ್ಟಪಡಿಸಿದ ವಾರಸುದಾರರೆಂದು ಪರಿಗಣಿಸಲ್ಪಡುವ ಸಂಬಂಧಿಗಳಿಗೆಃ***

***ಸಿ) ಮೂರನೇಯದಾಗಿ, ಒಂದು ವೇಳೆ ಎರಡೂ ವರ್ಗದ ವಾರಸುದಾರರು ಇಲ್ಲದಿದ್ದ ಪಕ್ಷದಲ್ಲಿ ಮೃತ ಜ್ಞಾತಿಗಳಿಗೆ ಮತ್ತು***

***ಡಿ) ಅಂತಿಮವಾಗಿ, ಒಂದು ವೇಳೆ ಜ್ಞಾತಿಗಳು ಇಲ್ಲದಿದ್ದ ಪಕ್ಷದಲ್ಲಿ ಮೃತನ ಸಗೋತ್ರ ಜ ಬಂಧುಗಳಿಗೆ ವಹಿಸಲ್ಪಡುತ್ತವೆ***

23. ಎ ಷೆಡ್ಯೂಲ್ ಸ್ವತ್ತಿನ ದಾವಾ ಐಟಂ ನಂ. 1, 2 ಮತ್ತು ಬಿ, ಸಿ ಷೆಡ್ಯೂಲ್ ಸ್ವತ್ತುಗಳು ವಾದಿಯ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತದೆ. ಆದ್ದರಿಂದ ಎ ಷೆಡ್ಯೂಲ್ ಸ್ವತ್ತಿನ ದಾವಾ ಐಟಂ ನಂ. 1 2 ಬಿಸಿ ಷಡ್ಯೂಲ್ ಸ್ವತ್ತುಗಳು ವಾದಿಯ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದು, ದಾವೆಯಲ್ಲಿ ಕೋರಿರುವಂತೆ ಸದರಿ ಸ್ವತ್ತುಗಳಲ್ಲಿ 1/6 ನೇ ಭಾಗದ ಹಿಸ್ಸಾ ಹಕ್ಕನ್ನು ಪಡೆಯಲು ಅರ್ಹರು ಎಂದು ಅಭಿಪ್ರಾಯಪಟ್ಟು 1, 3, 5 ಮತ್ತು ಹೆಚ್ಚುವರಿ ವಿವಾದಾಂಶ 2 ನ್ನು **ನಕಾರಾತ್ಮಕವಾಗಿ,** 2 ಮತ್ತು 6 ನೇ ವಿವಾದಾಂಶವನ್ನು **ಭಾಗಶಃ ಸಕಾರಾತ್ಮಕವಾಗಿ,** 4 ನೇ ವಿವಾದಾಂಶವನ್ನು **ಸಕಾರಾತ್ಮಕವಾಗಿ,** ಹೆಚ್ಚುವರಿ ವಿವಾದಾಂಶ 1 ನ್ನು **ಸಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

24. **ವಿವಾದಾಂಶಃ** 7 ಮೇಲಿನ ಅಂಶಗಳಲ್ಲಿ ಹೇಳಲಾದ ಕಾರಣಗಳಿಂದ ಮತ್ತು ಅವುಗಳಿಗೆ ನೀಡಲಾದ ಉತ್ತರಗಳಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

-**ಆದೇಶಃ**

**ವಾದಿಯ ದಾವೆಯನ್ನು ಭಾಗಶಃ ಡಿಕ್ರಿ ಮಾಡಲಾಗಿದೆ**

**ವಾದಿಯು ಎ ಷೆಡ್ಯೂಲ್ ಸ್ವತ್ತಿನ ದಾವಾ ಐಟಂ ನಂ 1 , 2 ಮತ್ತು ಬಿ, ಸಿ ಷೆಡ್ಯೂಲ್ ಸ್ವತ್ತುಗಳಲ್ಲಿ 1/6 ನೇ ಭಾಗದ ಹಿಸ್ಸಾ ಹಕ್ಕನ್ನು ಪಡೆಯಲು ಅರ್ಹರಾಗಿರುತ್ತಾರೆ.**

***ಈ ಮೇಲಿನ ಆದೇಶದಂತೆ ಪ್ರಾಥಮಿಕ ಡಿಕ್ರಿ ಬರೆಯುವುದು***

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನವನ್ನು ಕೊಟ್ಟು, ಅವರ ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದಲ್ಲಿ ತಿದ್ದಿ ಇಂದು ದಿನಾಂಕ 13 ನೇ ಮಾರ್ಚ್ 2020 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

-: **ಅನುಬಂಧ** : -

1. ವಾದಿಯ ಪರ ವಿಚಾರಿಸಲಾದ ಸಾಕ್ಷಿಗಳುಃ

| | | |
|---|---|---|
| ಪಿ.ಡಬ್ಲ್ಯೂ-1 | : | ರಂಗಮ್ಮ |

2. ವಾದಿಯ ಪರ ಗುರುತಿಸಲಾದ ದಾಖಲೆಗಳುಃ

| | | |
|---|---|---|
| ನಿಶಾನೆ ಪಿ-1 ರಿಂದ 7 | : | ಆರ್.ಟಿ.ಸಿ |
| ನಿಶಾನೆ ಪಿ-8 | : | ಎಂ.ಆರ್. |
| ನಿಶಾನೆ ಪಿ-9 | : | ಆಸ್ತಿ ತೆರಿಗೆ ರಿಜಿಸ್ಟರ್ |
| ನಿಶಾನೆ ಪಿ-10 | : | ನಮೂನೆ-3 |

3. ಪ್ರತಿವಾದಿಯರ ಪರ ವಿಚಾರಿಸಲಾದ ಸಾಕ್ಷಿಗಳುಃ

| | | |
|---|---|---|
| ಡಿ.ಡಬ್ಲ್ಯೂ-1 | : | ಬಿ.ಎನ್. ಮಂಜೇಗೌಡ |
| ಡಿ.ಡಬ್ಲ್ಯೂ-2 | : | ರವೀಶ್ |
| ಡಿ.ಡಬ್ಲ್ಯೂ-3 | : | ಸಿ.ನಾಗರಾಜು |

4. ಪ್ರತಿವಾದಿಯರ ಪರವಾಗಿ ಹಾಜರು ಪಡಿಸಿದ ದಾಖಲೆಗಳುಃ

| | | |
|---|---|---|
| ನಿಶಾನೆ ಡಿ-1 | : | ದಿಃ 15-07-2005 ರ ಮೂಲ ಕ್ರಯಪತ್ರ |
| ನಿಶಾನೆ ಡಿ-2 | : | ಮರಣ ಶಾಸನ ರದ್ದಿಯಾತಿ ಪತ್ರ |
| ನಿಶಾನೆ ಡಿ-3 | : | ದಿಃ 25-11-1995 ರ ಮರಣ ಶಾಸನ ಪತ್ರ |
| ನಿಶಾನೆ ಡಿ-4 | : | ದಿಃ 05-12-1988 ರ ಕ್ರಯಪತ್ರ |
| ನಿಶಾನೆ ಡಿ-5 ಮತ್ತು 6 | : | 2 ಆರ್.ಟಿ.ಸಿ |
| ನಿಶಾನೆ ಡಿ-7 ಮತ್ತು 8 | : | ಎಂ.ಆರ್. |
| ನಿಶಾನೆ ಡಿ-9 | : | ಋಣಭಾರ ರಾಹಿತ್ಯ ಪ್ರಮಾಣ ಪತ್ರ |
| ನಿಶಾನೆ ಡಿ-10 | : | ಕ್ರಯಪತ್ರ |
| ನಿಶಾನೆ ಡಿ-11 | : | ಗ್ರ್ಯಾಂಟ್ ಸರ್ಟಿಫಿಕೇಟ್ |

**ನಿಶಾನೆ ಡಿ**-12 **ಮತ್ತು** 13 : **ಪಾಲು ಪಟ್ಟಿ**

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.